ಆ) ಹೊಸನಗರ ಕ್ಷೇತ್ರದ ವ್ಯಾಪ್ತಿಯಲ್ಲಿ 2004–05ನೇ ಸಾಲಿನಲ್ಲಿ ಆರ್.ಐ.ಡಿ.ಎಫ್–10ರ ಯೋಜನೆಯಡಿ ಕೆಳಕಂಡ 2 ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಹೆಸರು	ಅಂದಾಜು ಮೊತ್ತ (ಲಕ್ಷ ರೂ.)	ರಸ್ತೆ ಉದ್ದ (ಕಿ.ಮೀ)	ಫೆಬ್ರವರಿ 2006ರವರೆಗೆ ಮಾಡಲಾದ ವೆಚ್ಚ (ಲಕ್ಷ ರೂ.)
ಹಾರೋಹಿತ್ಲು ತಮ್ಮಡಿ ಕೊಪ್ಪ ತಳಲೆ ರಸ್ತೆ ಅಭಿವೃದ್ಧಿ	80.00	8.50	4.56
ಕೋಟೆ ಗಂಗೂರು ಮುದ್ದಿನಕೊಪ್ಪ ರಸ್ತೆ ಅಭಿವೃದ್ಧಿ	35.00	30.00	3.12

ಇ) ಮೇಲೆ ತಿಳಿಸಿರುವ 2 ರಸ್ತೆ ಕಾಮಗಾರಿಗಳು ಇನ್ನೂ ಪ್ರಗತಿಯಲ್ಲಿವೆ.

12, (106) ಶ್ರೀ ಕೃಷ್ಣಮೂರ್ತಿ ಕೆ.ಎಂ, ಎಂಎಲ್ಎ(ಕಡೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೆಂಗಳೂರು ಮಹಾನಗರ ಪಾಲಿಕೆಯು ಪಡೆದಿರುವ ಒಟ್ಟು ಸಾಲದ ಮೊತ್ತವೆಷ್ಟು? (ಮೂರು ವರ್ಷಗಳ ಮಾಹಿತಿ ನೀಡುವುದು)

ಆ) ಯಾವ ಯಾವ ಸಂಸ್ಥೆಗಳಿಂದ ಎಷ್ಟೆಷ್ಟು ಸಾಲ ಪಡೆಯಲಾಗಿದೆ;

ಇ) ಯಾವ ಯಾವ ಯೋಜನೆಗೆ ಎಷ್ಟೆಷ್ಟು ಸಾಲದ ಹಣವನ್ನು ಖರ್ಚು ಮಾಡಲಾಗಿದೆ;

ಈ) ಇದುವರೆವಿಗೂ ಎಷ್ಟು ಸಾಲ ತೀರಿಸಲಾಗಿದೆ ಹಾಗೂ ಉಳಿದಿರುವ ಸಾಲದ ಮೊತ್ತವೆಷ್ಟು?

ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) ನಗರ ಪಾಲಿಕೆಯ 2002–03ರಿಂದ 2005–06ನೇ ಸಾಲಿನ ವರೆಗೂ ರೂ.82495.62 ಲಕ್ಷಗಳ ಸಾಲವನ್ನು ಪಡೆದಿರುತ್ತದೆ.

ಆ) ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಈ ಕೆಳಕಂಡ ಸಂಸ್ಥೆಗಳಿಂದ ಸಾಲವನ್ನು ಪಡೆದಿರುತ್ತದೆ.

ಕ್ರ. ಸಂ.	ಸಂಸ್ಥೆಯ ಹೆಸರು	2002–03	2003–04	2004–05	2005–06	ಒಟ್ಟು ಲಕ್ಷಗಳಲ್ಲಿ
1	ಕೆ.ಯು.ಐ.ಡಿ.ಎಫ್.ಸಿ.	1962.50	3962.50	564.20	-----	6219.10
2	ಹುಡ್ಕೋ	5776.52	13500.00	2000.00	---	21276.52
3	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ	---	---	25000.00	---	25000.00
4	ಕೆನರಾ ಬ್ಯಾಂಕ್ ಟೌನ್ ಹಾಲ್ ಶಾಖೆ	---	---	5000.00	12500.00	17500.00
5	ಸಿಂಡಿಕೇಟ್ ಬ್ಯಾಂಕ್ ಬಿ.ಡಬ್ಲ್ಯೂ.ಎಸ್.ಎಸ್.ಬಿ	---	---	5000.00	2500.00	7500.00
6	ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್	---	---	5000.00	---	5000.00
	ಒಟ್ಟು	7739.02	17192.40	42564.20	15000.00	82495.62
	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ದಿಂದ ಸಾಲ ಪಡೆದು ಹುಡ್ಕೋ ದಿಂದ ಪಡೆದ ಸಾಲ ಮರುಪಾವತಿ					20500.00
	ನಿವ್ವಳ ಒಟ್ಟು ಪಡೆದ ಸಾಲ					61995.62

ಇ) ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ. (ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು)

ಈ) ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ. (ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು)

13, (107) ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಶ್ರೀರಾಮ ಚಿಟ್ಸ್ ಕಂಪನಿಯ ಮೇಲೆ ಸಹಕಾರ ಇಲಾಖೆಯು 1996 ರಿಂದ 2006ರ ವರೆಗೆ ಎಷ್ಟು ಬಾರಿ ಇಲಾಖಾ ವಿಚಾರಣೆ ನಡೆಸಿದೆ?

ಆ) ವಿಚಾರಣಾ ವರದಿಯ ಮೇಲೆ ಶ್ರೀರಾಮ ಚಿಟ್ಸ್‌ರವರ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?